ಭಟ್ಕಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

181 (1869) ಶ್ರೀ ನಾಯಕ್ ಜಿ.ಡಿ. (ಭಟ್ಕಳ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊನ್ನಾವರ ತಾಲ್ಲೂಕಿನ ಮಂಕಿ, ಇಡಗುಂಜಿ ಹಾಗೂ ಅಳ್ಳಂಕಿ ಪದವಿಪೂರ್ವ ಕಾಲೇಜುಗಳಲ್ಲಿ ಮಂಜೂರಾದ ಪ್ರಿನ್ಸಿಪಾಲ ಬೋಧಕ (ಉಪನ್ಯಾಸಕರ) ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ. ಸದ್ರಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಎಷ್ಟು ವರ್ಷಗಳಿಂದ ಖಾಲಿ ಇವೆ;

ಇ. ಹುದ್ದೆ ಖಾಲಿ ಇರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಖಾಲಿ ಇರುವ ಹುದ್ದೆಗಳನ್ನು ಎಂದು ತುಂಬಲಾಗುವುದು?

ಪ್ರೋ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ.

ಕಾಲೇಜು,	ಪ್ರಿನ್ಸಿಪಲ್	ಉಪನ್ಯಾಸಕರು	ಬೋಧಕೇತರರು
ಮಂಕಿ	01	06	-
ಇಡಗುಂಜಿ	01	06	02
ಅಳ್ಳಂಕಿ	01	06	-

ಆ. ಖಾಳಿ ಇರುವ ಹುದ್ದೆಗಳು, ಮತ್ತು ಎಷ್ಟು ವರ್ಷಗಳಿಂದ ಖಾಲಿ ಇದೆ ಎಂಬ ವಿವರ ಆವರಣದಲ್ಲಿ ನೀಡಿದೆ.

ಕಾಲೇಜು,	ಪ್ರಿನ್ಸಿಪಲ್	ಉಪನ್ಯಾಸಕರು	ಬೋಧಕೇತರರು
ಮಂಕಿ	-	03 (3ವರ್ಷ)	-
ಇಡಗುಂಜಿ	-	03 (3ವರ್ಷ)	01 (3ವರ್ಷ)
ಅಳ್ಳಂಕಿ	01(1ವರ್ಷ)	03(1ವರ್ಷ)	-

ಇ. ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಕಡಿಮೆ ಕಾರ್ಯಭಾರವಿರುವ ಉಪನ್ಯಾಸಕರನ್ನು ವಾರದಲ್ಲಿ 3 ದಿನ ನಿಯೋಜಿಸುವ ಮೂಲಕ ಕಾರ್ಯಭಾರವನ್ನು ಸರಿದೂಗಿಸಲಾಗುತ್ತಿದೆ.

ಈ. ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.